N.B.—This report should be despatched within 24 (Twenty-four) hours after the occurrence of death.

Informant's name and address.

Register of Births in the Municipality of Kallurkatte during the month of.....192

Serial number	Date of registration	Father's name	Birth place	Residence	Father's occupation	Caste	Sex: Male	Sex: Female	Date of birth	Name of the child if any	Name of the informant	Residence of the informant	Signature or mark of the informant	Signature of the Sub-Registrar	Remarks	Remarks
1	2	3	4	5	6	7	8	9	10	11	12	13	14	15	16	17

Register of Deaths in the Municipality of Kallurkatte during the month of.....192

Serial number	Date of registration	Name of deceased	Father's name	Residence at the time of death	Age	Sex: Male	Sex: Female	Caste	Occupation	Date of death	Cause of death	Name of informant	Residence of the informant	Signature or mark of the informant	Signature of the Sub-Registrar	Particulars of the place of burial or burning ground	Remarks
1	2	3	4	5	6	7	8	9	10	11	12	13	14	15	16	17	18

P. KRISHNA RAO,
President.

W D 1176—GPB—629—8-1-58

ಕಳ್ಳೊಕುಳಟ್ಟೆ ಟವರ್ ಪೈನನ್ ಮ್ಯುನಿಸಿಪಾಲಿಟಿಯಲ್ಲಿರುವ ಬಂಜರು ಮನೆಗಳ ವಿಚಾರವಾಗಿ ವಿಧಿಸಬಹುದಾದ ರ್ಯಾಪ್ಸ್ ಬೈಲಾಗಳು.

ಈ ಡೈರಾ ವಿಚಾರವಾಗಿ ತಕರಾರು ಮಾಡುವ ಯಾ ಸಲಹೆ ಕೊಡತಕ್ಕವರ್ಯಾರಾದರೂ ಇದ್ದಲ್ಲಿ ಈ ನೋಟೀಸ್ ತಾರೀಖು ರಾಗಾಯ್ತು ಒಂದು ತಿಂಗಳೊಳಗಾಗಿ ಕಳೂರು ಕಚ್ಚೆ ಟವರ್ ಮೈನರ್ ಮ್ಯುನಿಸಿಪಲ್ (ಸಭೆಯವರಿಗೆ ಅಥವಾ) ಪ್ರೆಸಿಡೆಂಟರ ಹತ್ತಾ ಆಫೀಸಿಗೆ ಲಿಖಿತಮೂಲಕವಾಗಿ ತಿಳಿಸತಕ್ಕದ್ದು.

(1) ಮ್ಯುನಿಸಿಪಾಲಿಟಿಯ ಅವರಣದೊಳಗಿರತಕ್ಕ ಬಂಜರು ನಿವೇಶನವನ್ನು ಕುರಿತು (ಮನೆಗಳನ್ನು ಕಟ್ಟುವುದಕ್ಕೆ ಯೋಗ್ಯವಾದ) ಸದರಿ ನಿವೇಶನದ ಯಜಮಾನನಾಗಲೀ ಯಜಮಾನನಾರೆಂದು ತಿಳಿದುಕೊಳ್ಳಲು ಅಸಾಧ್ಯವಾದ ಪಕ್ಷದಲ್ಲಿ ಸದರಿ ನಿವೇಶನವನ್ನು ಸ್ವಾಧೀನದಲ್ಲಿಟ್ಟುಕೊಂಡಿರತಕ್ಕವರಾಗಾಗಲೀ, ಸದರಿ ನಿವೇಶನದ ಯಜಮಾನ ಅಥವಾ ಸ್ವಾಧೀನತೆಯ ವಿಷಯ ದಲ್ಲಿ ಅನುಮಾನ ತೋರಿ ಬಂದಲ್ಲಿ ಸದರಿ ನಿವೇಶನದಲ್ಲಿ ಮುತವರ್ದಿ ವಹಿಸತಕ್ಕವರಿಗಾಗಲೀ ಪ್ರೆಸಿಡೆಂಟ್ ಅಥವಾ ವೈಸ್‌ಪ್ರೆಸಿಡೆಂಟರಾಗಲೀ ಸದರಿ ಸ್ಥಳದಲ್ಲಿ 6 ತಿಂಗಳಿಗಿಂತಲೂ ಹಡ್ಡಾಗದಂತೆ ವಾಯಿದೆ ನಿರ್ಧರಿಸಿ ಮನೆ ಕಟ್ಟಿಸಲು ಒತ್ತಿ ಹೇಳುವರು ಅಲ್ಲದೆ ಪ್ರೆಸಿಡೆಂಟ್ ಅಥವಾ ವೈಸ್ ಪ್ರೆಸಿಡೆಂಟರವರಿಗೆ ಹಾಗೆ ಮಾಡುವುದು ಯುಕ್ತವೆಂದೂ ಅಗತ್ಯವೆಂದೂ ತೋರುವ ಸಂದರ್ಭದಲ್ಲಿ ಮಾತ್ರ ಮೇಲೆ ಹೇಳಿದಂತೆ ಸದರಿ ಸ್ಥಳವನ್ನು ಬೇಲಿಯೊಳಕ್ಕೆ ಸೇರಿಸಿ ಸರಿಯಾದ ರೀತಿಯಲ್ಲಿ ಕಾವಾಡಿಡಲು ಮೂರು ತಿಂಗಳು ಅಥವಾ ಯುಕ್ತವೆಂದು ತೋರುವಷ್ಟು ವಾಯಿದೆ ನಮೂದಿಸಿಂದ ನೋಟೀಸನ್ನು ಕೊಡಬಹುದು.

ತಪ್ಪಿನಡೆದಲ್ಲಿ ಮುಂದಿನ ಕ್ರಮ.

(2) ಮ್ಯುನಿಸಿಪಲ್ ರೆಗ್ಯುಲೇಷ್ ಸೆಕ್ಷೆ 91-A (1) ನ್ನು ಅನುಸರಿಸಿ ನೋಟೀಸ್ ಕೊಟ್ಟ ಪ್ರಕಾರ ಮನೆ ಕಟ್ಟಿಡ ಪೂರೈಸದಿರುವ ಸಂದರ್ಭದಲ್ಲೂ ಸೆಕ್ಷೆ 91-A (1) ನ್ನು ಅನುಸರಿಸಿ ಸದರಿ ನಿವೇಶನವನ್ನು ದೇಲ ಹಾಕುವುದರ ಮುಖಾಂತರ ಸರಿಯಾದ ಸ್ಥಿತಿಯಲ್ಲಿ ಕಾವಾಡಿಡದಿರುವ ಭಾಗದಲ್ಲೂ ನೋಟೀಸಿನಲ್ಲಿ ನಮೂದಿಸಿರುವ ವಾಯಿದೆ ಗತಿಸಿದ ನಂತರ ಪ್ರೆಸಿಡೆಂಟ್ ಅಥವಾ ವೈಸ್‌ಪ್ರೆಸಿಡೆಂಟರವರು ಸದರಿ ಸ್ಥಳವನ್ನು ಆಕ್ರಮಿಸಿಕೊಂಡು ಸದರಿ ಸ್ಥಳವನ್ನು ಹರಾಜುಮೂಲಕವಾಗಲ ಅಥವಾ ದೇರೆ ವಿಧವಾಯಾಗಲಿ ಕಟ್ಟಡ ಕಟ್ಟತಕ್ಕ ಬಗ್ಗೆ ಸದರಿ ನಿವೇಶನದ ಯಜಮಾನನಿಂದ ಸದರಿ ನಿವೇಶನದ ಆಧಾರದ ಮೇಲೆ ಸಾಲ ವಗೈರೆ ಮಾಡಲ್ಪಟ್ಟಿರುವುದನ್ನು ಯಜಮಾನನ ಮೂಲಕ ಸದರಿ ಸ್ಥಳದ ಇತರ ಹಕ್ಕುದಾರನನ್ನೂ ಲಕ್ಷ್ಯಮಾಡದೆ ಸದರಿ ಸ್ಥಳವನ್ನು ಏರೇ ವಾರಿ ಮಾಡಬಹುದು. ಸದರಿ ಸ್ಥಳವನ್ನು ಆಕ್ರಮಿಸಿಕೊಂಡು ಏರೇವಾರಿ ಮಾಡುವುದರಲ್ಲಿ ಮ್ಯುನಿಸಿಪಾಲಿಟಿಯಿಂದ ತಗಲಿದ ಖರ್ಚು ವಜಾ ಜಾತಾ ಉಳಿದ ಮೊಬಲಗನ್ನು ಯಜಮಾನನಿಗಾಗಲೀ ಅವನ ಮೂಲಕ ಆ ಹಣಕ್ಕೆ ಬಾಧ್ಯನಾಗಿರುವ ಇತರ ಯಾವನಿಗಾಗಲೀ ಕೊಡಲ್ಪಡಬಹುದು.

ಬಂಜರು ನಿವೇಶನಗಳನ್ನು ಮ್ಯುನಿಸಿಪಾಲಿಟಿಗೆ ಸೇರಿಸಿಕೊಂಡು ಅವುಗಳ ಏರೇವಾರಿ ಮಾಡತಕ್ಕ ವಿಚಾರದಲ್ಲಿ.

(3) ಒಂದು ಬಂಜರು ನಿವೇಶನವು ಯಾವ ಶೌರ್ಯಕ್ಕೋಸ್ಕರ ಮಾಡಲ್ಪಟ್ಟಿತೋ ಆ ಕಾರ್ಯವನ್ನು ನೆರವೇರಿಸಲು ಪದಿರುವ ಪಕ್ಷದಲ್ಲಿ ಪ್ರೆಸಿಡೆಂಟ್ ಅಥವಾ ವೈಸ್‌ಪ್ರೆಸಿಡೆಂಟರವರು ಇಂಥ ಸಮಯದಲ್ಲಿ ಅಗತ್ಯವಾದ ನೋಟೀಸನ್ನು ಸದರಿ ನಿವೇಶನದ ಯಜಮಾನನಿಗಾಗಲಿ, ಆತನು ಸಿಕ್ಕದಿರುವ ಮತ್ತು ತಿಳಿಯದಿರುವ ಪಕ್ಷದಲ್ಲಿ ಆ ಸ್ಥಳದ ಅನುಭವದಲ್ಲಿರುವವನಿಗೆ ಜಾರಿ ಮಾಡಿ ಸದರಿ ನಿವೇಶನದ ಯಜಮಾನನಿಂದ ಯಾವ ಅಧ್ಯಂತರವೂ ಮತ್ತು ನಿವೇಶನದ ಆಧಾರದಮೇಲೆ ಮಾಡಿದ ಸಾಲಸಂಬಂಧ ಮುಂತಾದ ವುಗಳಿಗೆ ಲಕ್ಷ್ಯಮಾಡದೆಯೂ ಆತನ ಮುಖಾಂತರ ದೇರೆಯವರ ಬಾಧ್ಯತೆ ಬಂದಲ್ಲಿ ಅದನ್ನು ಲಕ್ಷ್ಯಮಾಡದೆ ಸದರಿ ನಿವೇಶನದಲ್ಲಿರ ತಕ್ಕ ಕಟ್ಟಡದೊಂದಿಗೆ ಮ್ಯುನಿಸಿಪಾಲಿಟಿಗೆ ಅಸ್ತಿಯಾಗಿ ಸೇರಿಸಿಕೊಂಡು ಸೇರಿಸಿಕೊಂಡನಂತರ ಅದನ್ನು ಮಾರುವುದಕ್ಕೆ ಒಂದು ತಿಂಗಳಿಗೆ ಮುಂಚೆ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿ ಸದರಿ ನಿವೇಶನವನ್ನು ಕಟ್ಟಡಕಟ್ಟುವುದಕ್ಕಾಗಿ ಹರಾಜುಮೂಲಕವಾಗಲೀ ದೇರೆ ವಿಧದಿಂದಲಾಗಲೀ ಸದರಿ ನಿವೇಶನವನ್ನು ಅವರಮೇಲೆ ಇರತಕ್ಕ ಕಟ್ಟಡದೊಂದಿಗೆ (ಕಟ್ಟಡವಿದ್ದಲ್ಲಿ) ನಿವೇಶನದ ಯಜಮಾನನಿಗಾಗಲೀ ಅಥವಾ ಅವನ ಮುಖಾಂತರ ಇನ್ಯಾರಾದರೂ ಬಾಧ್ಯತೆ ಇದೆಯೆಂದು ಹೇಳಿದಲ್ಲಿ ಅವುಗಳನ್ನೆಲ್ಲಾ ಲಕ್ಷ್ಯಕ್ಕೆ ತಾರದೆ ಸದರಿ ಸ್ಥಳವನ್ನು ಮಾರುವುದಕ್ಕೆ ಆ ರೀತಿ ಮಾಡುವುದರಲ್ಲಿ ಮ್ಯುನಿಸಿಪಾಲಿಟಿಯಿಂದ ತಗಲಿದ ಖರ್ಚು ವಜಾ ಜಾತ ಬಾಕಿ ಹಣವನ್ನು ಯಜಮಾನನಿಗೆ ಅಥವಾ ಅವನ ಮುಖಾಂತರ ಬಾಧ್ಯತೆಯನ್ನು ಹೊಂದಿರುವ ದೇರೊಬ್ಬರಿಗೂ ಕೊಡುವುದಕ್ಕೂ ಪ್ರೆಸಿಡೆಂಟ್ ಮತ್ತು ವೈಸ್‌ಪ್ರೆಸಿಡೆಂಟರವರಿಗೆ ಈ ಮೂಲಕ ಅಧಿಕಾರವಿರುತ್ತೆ.

ಮೇರ ನಮೂದಿಸಿರುವ ಒಳ ನಿಬಂಧನೆಗಳನ್ನು ಪ್ರೆಸಿಡೆಂಟ್ ಅಥವಾ ವೈಸ್‌ಪ್ರೆಸಿಡೆಂಟರವರು ಚಲಾಯಿಸುವ ವಿಷಯದಲ್ಲಿ ಗೌರ್ನಮೆಂಟಿನವರಿಂದಲೂ ಮತ್ತು ಮ್ಯುನಿಸಿಪಲ್ ಸಭೆಯವರಿಂದಲೂ ಅನುಮತಿಯನ್ನು ಪಡೆದು ಚಲಾಯಿಸಬೇಕು.

ಬಂಜರು ನಿವೇಶನಗಳನ್ನು ಮ್ಯುನಿಸಿಪಾಲಿಟಿಯಿಂದ ಹರಾಜು ಮೂಲಕವಾಗಲೀ ದೇರೆ ವಿಧವಾಗಿಯಾಗಲೀ ಏರೇವಾರಿ ಮಾಡತಕ್ಕ ವಿಷಯದಲ್ಲಿ.

(1) ಮ್ಯುನಿಸಿಪಾಲಿಟಿಗೆ ಸೇರಿಸಿಕೊಂಡ ಬಂಜರು ನಿವೇಶನವನ್ನು ಅರ್ಜಿಯನ್ನು ಹಾಜರು ಮಾಡಿಸಿಕೊಂಡನಂತರ ಗೌರ್ನಮೆಂಟಿನವರ ಅಪ್ಪಣೆಯನ್ನು ಪಡೆದು ಪ್ರೆಸಿಡೆಂಟರವರು ಹರಾಜು ಮೂಲಕವಾಗಲೀ ಅಥವಾ ದೇರ ವಿಧದಲ್ಲಾಗಲೀ ಏರೇವಾರಿ ಮಾಡುಬಹುದು.

(2) ಪ್ರೆಸಿಡೆಂಟ್ ಅಥವಾ ವೈಸ್ ಪ್ರೆಸಿಡೆಂಟರವರು ಯಾವ ಅರ್ಜಿಯನ್ನಾದರೂ ಯಾವ ಕಾರಣವನ್ನೂ ಹೇಳದೆ ತಿರಸ್ಕರಿಸಬಹುದು.

(3) ಮನೆ ಕಟ್ಟುವುದಕ್ಕಾಗಿ ಕೊಡತಕ್ಕ ನಿವೇಶನದಲ್ಲಿ ಮನೆ ಕಟ್ಟಲು ಇಷ್ಟವಿಲ್ಲದಿರುವವನಿಗೆ ಯಾವ ನಿವೇಶನವೂ ಹೊರೆಯುವಾರದು.

(4) ಎಲ್ಲಾ ಹರಾಜುಗಳು ಮ್ಯುನಿಸಿಪಲ್ ಸಭೆಯವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

(5) ಹರಾಜುದಾರನು ತಾನು ನಿವೇಶನವನು ಪಡೆದುಕೊಂಡ ರಾಗಾಯಿತು ಆರು ತಿಂಗಳುವರಿವಿಗೆ ಕಟ್ಟಬೇಕಾದ ಸಾಮಗ್ರಿಯಗಳನ್ನು ಒದಗಿಸಿಕೊಂಡು ಒಂದು ವರ್ಷದೊಳಗೆ ಸದರಿ ಕಟ್ಟಡವನ್ನು ಪೂರ್ತಿಸಬಹುದು.

(6) ಹಾಗೆ ನಿಯಮಿತವಾದ ಕಾಲದಲ್ಲಿ ಕಟ್ಟಡವನ್ನು ಕಟ್ಟಿ ಪೂರೈಸದಿರುವ ಭಾಗದಲ್ಲಿ ಹರಾಜುದಾರನು ಸದರಿ ನಿವೇಶನದ ಮೇಲಿನ ಹಕ್ಕನ್ನು ಕಳದುಕೊಳ್ಳುವುದಲ್ಲದೆ ಸದರಿ ನಿವೇಶನವು ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಲ್ಪಡುವುದು.

(7) ಕಟ್ಟಡಗಳು ಭವ್ಯವಾಗಿಯೂ ನೋಡುವುದಕ್ಕೆ ಅಂಜುವಾಗಿಯೂ ಮೇಲಿನ ನಿಬಂಧನೆಯಲ್ಲಿ ಹೇಳಿದಂತೆ ನ್ಯೂಸೆನ್ಸ್ ಬಾಧೆಗೆ ಸಾಲಾಜಿಸ್ಸು (conservency) ಪರ್ಮಾಡು ಮಾಡಲ್ಪಟ್ಟಡ್ಡಾಗಿಯೂ ಇರತಕ್ಕದ್ದು.

(8) ಮ್ಯುನಿಸಿಪಲ್ ಪ್ರೆಸಿಡೆಂಟ್ ಅಥವಾ ವೈಸ್ ಪ್ರೆಸಿಡೆಂಟರವರಿಂದ ಮಂಜೂರಾಗದ ಯಾವ ನಿವೇಶನಕ್ಕೂ ಹರಾಜಾಗಿ ತೀರಿಯ ಸಹ ದೆರೆ ಬಾಳತಕ್ಕದ್ದಲ್ಲ.

ಪಿ. ಕೃಷ್ಣರಾವ್
ಪ್ರೆಸಿಡೆಂಟ್ ಕಳೂರು ಕಚ್ಚೆ ಮ್ಯುನಿಸಿಪಾಲಿಟಿ.

ಮನೆಗಳನ್ನು ಮತ್ತು ಇತರ ಕಟ್ಟಡಗಳನ್ನು ಕಟ್ಟಿಸತಕ್ಕ ವಿಚಾರದಲ್ಲಿ ವಿಧಿಸಬಹುದಾದ ಪ್ರಾಫ್ಟ್ ಬೈಲಾ.

4. ಕಟ್ಟಡ ಕಟ್ಟಬೇಕೆಂದು ಉದ್ದೇಶ ಪಡತಕ್ಕ ಪ್ರತಿಯೊಬ್ಬ ಮನುಷ್ಯನೂ ಸದರಿ ವಿಚಾರವನ್ನು ಪ್ರೆಸಿಡೆಂಟರವರ ನಿಗಾವಣೆಗೆ ತರತಕ್ಕದ್ದು.—ಯಾವ ಮನುಷ್ಯನೇ ಆಗಲೀ ಕೆಳೂರು ಕಟ್ಟಿ ಟರ್ಪನಲ್ಲಿ ಹೊಸದಾಗಿಯಾಗಲೀ ಅಥವಾ ಹಳೇದನ್ನು ಪುನಹ ಕಟ್ಟಬೇಕಾಗಿಬಂದಾಗ ಇಂದಾಗ 1906ನೆ ಇಸವಿ VIIನೇ ಮ್ಯುನಿಸಿಪಲ್ ರೆಗ್ಯುಲೇಷನ್ 92ರ ರಾಗಾಯಿತು 96ರ ವರೆಗಿನ ನಿರ್ಬಂಧಗಳಿಗೆ ಅನುಸಾರವಾಗಿ ತನ್ನ ಅಭಿಪ್ರಾಯವನ್ನು ಕುರಿತು ಪ್ರೆಸಿಡೆಂಟರವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.

5. ಸದರಿ ನಕ್ಷೆಯಲ್ಲಿ ತೋರಿಸಬೇಕಾದ ಅಥವಾ ಸಮೀಪಿಸಬೇಕಾದ ಅಂಶಗಳು.—ಅಂಥ ನೋಟೀಸಿನ ಜೊತೆಯಲ್ಲಿ ಕಟ್ಟಡ ಕಟ್ಟಬೇಕೆಂದು ಉದ್ದೇಶಿಸಿರುವ ಜಾಗದ ನಕ್ಷೆಯ ದ್ವಿಪ್ರತಿಯನ್ನು ಹಾಜರು ಮಾಡಬೇಕು ಸದರಿ ನಕ್ಷೆಯನ್ನು 10 ಅಡಿಗೆ ಒಂದು ಅಡಿಗಿಳಿಯುವಂತೆ ಅಳತೆಗೆ ಕಮ್ಮಿ ಇಲ್ಲದ ಸ್ಕೇಲಿನ ಪ್ರಕಾರ ಬರೆಯಬೇಕು.

(a) ಈ ನಕ್ಷೆಯಲ್ಲಿ ಸದರಿ ಪ್ರದೇಶದಲ್ಲಿ ಎಷ್ಟಾದರೂ ಕಟ್ಟಡಗಳು ಇದ್ದ ಪಕ್ಷದಲ್ಲಿ ಅವುಗಳು ಇರತಕ್ಕ ಜಾಗ ಕಟ್ಟಡದ ತರಹೆ ಮತ್ತು ಯಾತಕ್ಕೋಸ್ಕರ ಉಪಯೋಗಿಸಲ್ಪಡುತ್ತಾ ಇದೆ ಎಂಬ ಭಾಗವನ್ನು ಮತ್ತು ಮುಂದೆ ಕಟ್ಟತಕ್ಕ ಕಟ್ಟಡಗಳನ್ನು ಪಿಟು ಹೌಸುಗಳನ್ನು ತೋರಿಸಬೇಕು.

(b) ಸದರಿ ಪ್ರದೇಶದಲ್ಲಿ ಕಟ್ಟತಕ್ಕ ಮನೆ ಮತ್ತು ಇದಕ್ಕೆ ಸಂಬಂಧಪಟ್ಟ ಪಿಟು ಹೌಸುಗಳು ಎಷ್ಟು ಜಾಗಗಳನ್ನು ಒಳಕೊಳ್ಳಬಹುದು ಎಂಬುದನ್ನು ತೋರಿಸಬೇಕು.

(c) ಸದರಿ ಪ್ರದೇಶಕ್ಕೆ ಅಜುಬಾಜುವಲ್ಲಿ ಇರತಕ್ಕ ಮೊದ್ದ ಅಥವಾ ಸಣ್ಣ ರಸ್ತೆಗಳ ಕಟ್ಟಡಗಳ, ಅಥವಾ ಮೊಹರಿಗಳ ಹೆಸರು, ಅಥವಾ ವಿವರಣೆಯನ್ನು ಕೊಡತಕ್ಕದ್ದು.

(d) ಸದರಿ ಪ್ರದೇಶದ ಇರತಕ್ಕ ರಾಜಿನ ನೆಂಬರು ಮತ್ತು ಅದು ಇರತಕ್ಕ ಬ್ಲಾಕಿನ ಅಥವಾ ಬೀದಿಯ ಹೆಸರು ಅಥವಾ ನಂಬರುಗಳನ್ನು ತೋರಿಸಬೇಕು.

ಸ್ಕೇಲಿನ ಸಹಾಯದಿಂದ ಪ್ರೆಸಿಡೆಂಟರು ಯಾವ್ಯಾವ ರೀತಿಯಲ್ಲಿ ಕಟ್ಟತಕ್ಕ ಕಟ್ಟಡವು ಸದರಿ ಸೈಟಿನಲ್ಲಿ ಯಾವ ಕಡೆ ಯಾವ ಜಾಗದಲ್ಲಿ ಬರುತ್ತೆಂಬುದನ್ನು ಅನುಮಾನ ಕಟ್ಟಡಗಳ ಅಥವಾ ಪ್ರದೇಶಗಳಿಗೆ ಯಾವ ಕಡೆಗಳಲ್ಲಿ ಎಷ್ಟುದೂರದಲ್ಲಿ ಬರುತ್ತೆಂಬುದನ್ನು ಸಹ ಸದರಿ ಸ್ಕೇಲಿನಲ್ಲಿ ತೋರಿಸಿದರೆ ಸಾಕಾಗಿರುತ್ತೆ.

ಮ್ಯುನಿಸಿಪಲ್ ನೌಕರರುಗಳು ಮುಕ್ತವಾದ ಕಾಲದಲ್ಲಿ ಯಾವಾಗ ಕೇಳಿದರೂ ಸಂಬಂಧಪಟ್ಟ ಮನುಷ್ಯನು ರೈಸೆನು ಮತ್ತು ನಕ್ಷೆಯನ್ನು ಹಾಜರು ಪಡಿಸತಕ್ಕದ್ದು.

6. ಯಾವ ಜಾಗವನ್ನೇ ಆಗಲಿ, ಮನುಷ್ಯರ ವಾಸಕ್ಕೆ ಉದ್ದೇಶಿಸಲ್ಪಟ್ಟ ಕಟ್ಟಡವನ್ನು ಕಟ್ಟತಕ್ಕ ಸ್ಥೈರ್ಯವಾಗಿ ಉಪಯೋಗಿಸಬೇಕಾದಲ್ಲಿ.—(a) ಕಟ್ಟಡವೆದುರಿಗೆ ಅಭಿಮುಖವಾಗುವಲ್ಲಿ ನಿಜೇತನವು ಹೇಗಿರಬೇಕೆಂದರೆ ಅದೆರಲ್ಲಿ ಕಟ್ಟುವ ಕಟ್ಟಡವು ರಸ್ತೆಗೆ ಪ್ಯಾರಲಲ್ (Parallel) ಆಗಿ ಕಟ್ಟಲು ಅವಕಾಶ ಇರಬೇಕು.

(b) ಕಟ್ಟಡ ಪದಾರ್ಥಗಳನ್ನು ಮತ್ತು ಚರಂಡಿ ನೀರಿನಿಂದ ತುಂಬಿರುವ ಅಥವಾ ಭರ್ತಿಯಾಗಿರುವ ಅಥವಾ ಜಮಾ ಮಿಸುವುದಕ್ಕಾಗಿ ಮಾಡಿಕೊಂಡಿರುವ ಕೆರೆ ಗುಂಡಿಗಳ ಮೇಲಾಗಲಿ ಸದರಿ ಜಾಗವು ಇದ್ದಲ್ಲಿ ಅಸ್ಥಳವು ಮನೆ ಕಟ್ಟುವುದಕ್ಕೆ ಯೋಗ್ಯಕಾವ್ದೆಂದು ಪ್ರೆಸಿಡೆಂಟರವರಿಂದ ಸರ್ಟಿಫಿಕೇಟ್ ಆದ ಹೊರತು ಕಟ್ಟಡಕ್ಕೆ ಉಪಯೋಗಿಸಕೂಡದು.

(c) ಸದರಿ ಜಾಗವು ಗೊಬ್ಬರ ಪಗ್ಗೆರೆ ತುಂಬಿದ ಜಾಗವಾಗಲೀ ಅಥವಾ ತುಂಬುವುದಕ್ಕೆ ಮಾಡಿದ್ದ ಜಾಗವಾಗಲೀ ಅಥವಾ ಸತ್ತ ಪ್ರಾಣಿಗಳನ್ನು ಹೂಳತಕ್ಕ ಜಾಗವಾಗಲಿ ಆಗಿದ್ದರೆ ಅಂಥಾ ಕಟಡಾಮನ್ನು ಪ್ರೆಸಿಡೆಂಟರವರ ಮನಸ್ಸು ತೃಪ್ತಿಕರವಾಗುವಂತೆ ಚೊಕ್ಕಟ ಮಾಡಿರಬೇಕು ಮತ್ತು ವಾಸಕ್ಕೆ ಅಪಾಯಕರವಲ್ಲವೆಂದು ಅಭಿಪ್ರಾಯಪಟ್ಟಿರಬೇಕು.

(d) ಪ್ರೆಸಿಡೆಂಟರವರು ಸದರಿ ಜಾಗವು ಶೀತವಲ್ಲವೆಂತಲೂ ಮತ್ತು ಶೀತ ಪಗ್ಗೆರೆಗೆ ಅವಕಾಶವಿಲ್ಲದ ಹಾಗೆ ಚರಂಡಿ ಪಗ್ಗೆರೆ ಪುಳ್ಳುವಾಗಿಯೂ ಅಥವಾ ಚರಂಡಿ ಪಗ್ಗೆರ ಹಾಕಲು ಅವಕಾಶವಿದೆಯೆಂದು ಅಭಿಪ್ರಾಯಪಟ್ಟಿರಬೇಕು.

(e) ಬಪ್ಪನೀರು ಹೊರಗೆ ಇರತಕ್ಕ ಮೊಹರಿಗೆ ಹೋಗವೆ ತಗ್ಗಿನ ಪ್ರದೇಶವಾಗಿದ್ದ ಪಕ್ಷದಲ್ಲಿ ಇಂಥಾ ಜಾಗಗಳಲ್ಲಿ ಮನೆಗಳನ್ನು ಕಟ್ಟಕೂಡದು.

7. ಮ್ಯುನಿಸಿಪಾಲಿಟಿಯ ಚರಂಡಿಗಳ ಮೇಲೆ ಕಟ್ಟಡಗಳನ್ನು ಕಟ್ಟುವುದು.

8. ಮನೆ ಪಕ್ಕಗಳಲ್ಲಿ ಗುಂಡಿಗಳನ್ನು ತೆಗೆಯಿಕೂಡದು.—ವಾಸವ ಮನೆಗಳನ್ನು ಕಟ್ಟಲು ನಿರ್ದೇಶಿಸಿರತಕ್ಕ ಪ್ರದೇಶಗಳಲ್ಲಿ ಗುಂಡಿಗಳನ್ನು ತೆಗೆಯಿಕೂಡದು.

9. ಮನೆಗಳ ಸುತ್ತಮುತ್ತಲೂ ರಾಂಟಾನ ಪಗ್ಗೆರೆ ಗಿಡಗಳನ್ನು ಬೆಳಿಸಕೂಡದು —ಮನೆಗಳ ಸುತ್ತಲೂ ರಾಂಟಾನ ವಾವಾಸು ಕಳ್ಳ ಪಗ್ಗೆರೆ ನಿರ್ಮೂಲಿಸಲ್ಪಡಬಹುದಾದ ಗಿಡಗಳ ಬೇಲಿಯನ್ನಾಗಲೀ ಅಥವಾ ಕಬ್ಬಿಣದ ಮುಳ್ಳುತಂತಿಯ ಬೇಲಿಯನ್ನಾಗಲೀ ಹಾಕಕೂಡದು.

10. ಮನೆಗೂ ಪಕ್ಕದ ರಸ್ತೆಗೂ ಮಧ್ಯ ಜಾಗ ಬಿಡಬೇಕು.—ರಸ್ತೆ ಬೀದಿಯ ತಳಹದಿಯಿಂದ 10 ಅಡಿಗೆ ಕಮ್ಮಿಯಿಲ್ಲದೆ ಜಾಗವನ್ನು ಬಿಡದೆ ಯಾವ ಮನುಷ್ಯನಾಗಲೀ ಹೊಸದಾಗಿ ಮನೆಯನ್ನು ಕಟ್ಟಕೂಡದು. ಆದರೆ ಪ್ರೆಸಿಡೆಂಟರವರು ಅವಶ್ಯಕವೆಂದು ತಿಳಿದರೆ 15 ಅಡಿಗೆ ಜಾಸ್ತಿಯಾಗದಂತೆ ಜಾಗವನ್ನು ಬಿಡಿಸಲು ಅಧಿಕಾರವುಳ್ಳವರಾಗಿರುತ್ತಾರೆ. ಅಂಥ ನಂದರ್ಭದಲ್ಲಿ 10 ಅಡಿಗಿಂತ ಜಾಸ್ತಿಯಾಗಿ ಬಿಡಿಸಿಕೊಳ್ಳಲ್ಪಟ್ಟ ಜಾಗಕ್ಕೆ ಸೂಕ್ತ ತೋರುವ ಕಂಪೆನ್ಸೇಷನ್ ಕೊಡಲ್ಪಡುವುದು.

11. ಮನೆ ಬೆಲಗಟ್ಟು ವಿಚಾರ.—ಹೊಸದಾಗಿ ವಾಸಕ್ಕಾಗಿ ಮನೆಯನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನೂ ಸುತ್ತ ಮುತ್ತ ಜಾಗಕ್ಕಿಂತ 2 ಅಡಿಗಳು ಎತ್ತರವಾಗಿಯೂ ಮತ್ತು ಚರಂಡಿಯ ಮಟ್ಟಕ್ಕಿಂತ 3 ಅಡಿಗಳು ಎತ್ತರವಾಗಿಯೂ ನೆಲ ಗಟ್ಟು ಕಟ್ಟತಕ್ಕದ್ದು.

12. ಮನೆಯ ಸೂರು ರಸ್ತೆ ಚರಂಡಿಗಿಂತ ಮುಂದೆ ಉಡಾಯಿಸಕೂಡದು.—ಕಟ್ಟಡಗಳ ಸೂರು ಕಿಟಿಕಿಗಳಿಗೆ ಹಾಕಿರತಕ್ಕ ಬಿಸಿಲು ತಟ್ಟಿಗಳೂ ಸೂರು ನೀರನ್ನು ಚರಂಡಿಗೆ ತರತಕ್ಕ ಕೊಳವಿಗಳೂ ಸಹ ಮನೆಯ ಪಕ್ಕದಲ್ಲಿರತಕ್ಕ ರಸ್ತೆಯ ಬಾಡು ಚರಂಡಿಗಿಂತ ಮುಂದೆ ಉಡಾಯಿಸಕೂಡದು. ಮತ್ತು ಅಂಥಾ ಕೊಳವಿಗಳನ್ನು ನೆಲದ ವರೆವಿಗೂ ತರಬೇಕು.

13. ಮನೆ ಮುಂಭಾಗ.—ಮನೆಯ ಮುಂಭಾಗವು ಸುತ್ತಮುತ್ತಿನ ಮನೆ ದಳಗಳಂತೆ ಲಕ್ಷಣವಾದ ಮುಂಭಾಗವಿರಬೇಕು. ಮತ್ತು ನೆಸಸಿ ಹೋಗತಕ್ಕೆ ಅಥವಾ ಸುಲಭವಾಗಿ ಬೆಂಕಿ ಹತ್ತಲ್ಪಡಬಹುದಾದ ಸಾಮಾನುಗಳನ್ನು ಕಟ್ಟಡಕ್ಕೆ ಉಪಯೋಗಿಸಬಾರದು. ಮನೆಯ ಎರಾ ಭಾಗಕ್ಕೂ ಹೆಂಚಿನ ಚಾವಣಿಯನ್ನು ಹಾಕಬೇಕು.

14. ಹೊಸ ಚರಂಡಿ ಎಷ್ಟಾರ.—ಮನೆಯನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನೂ ಪ್ರತಿಯೊಂದು ಕೊಠಡಿಗೂ, ಹೊರಗಿನ ಪಾಳಿಯನ್ನು ಯಥೇಚ್ಛವಾಗಿ ಪ್ರವೇಶಿಸುವ ಹಾಗೆ ಕಿಟಕಿಗಳನ್ನು ಇಡಬೇಕು. ಕಟಕಿ ಮತ್ತು ಬಾಗಿಲುಗಳ ಒಟ್ಟು ಅಳತೆಯು ಕೊಠಡಿಯ ಚದರದ 10ರಲ್ಲಿ ಒಂದು ಭಾಗಕ್ಕಿಂತಲೂ ಕಮ್ಮಿಯಾಗಿರಕೂಡದು.

15. ವಾಸದ ಮನೆಗಳು ಇರುತಕ್ಕ ಜಾಗಡಲ್ಲಿ ಮಿಥ್ಯೆದಲ್ಲಿ ಅಂಗಡಿ ಮ್ಯಾರೆ ಕಟ್ಟಕೂಡದು.—ವಾಸದ ಮನೆಗಳು ಇರುವ ಶ್ರೇಣಿಯಲ್ಲಿ ಅಲ್ಲಿ ವಾಸವಾಗಿರುವ ಜನಗಳ ಪೈಕಿ ೫ ಭಾಗ ಜನಗಳಾದರೂ ಒಪ್ಪಿದ ಹೊರತು ಯಾವ ಅಂಗಡಿಯನ್ನಾಗಲೀ ಮಾರ್ಕೆಟ್ಟನ್ನಾಗಲೀ ಕಾರ್ಖಾನೆಯನ್ನಾಗಲೀ ಅಥವಾ ಸರ್ವರೂ ನೇರತಕ್ಕ ತಥೇತೆ ಮೆಗ್ಯೆರೆಗಳನ್ನು ಕಟ್ಟಕೂಡದು.

ಈ ಬೈಲಾ ಬಗ್ಗೆ ಯಾವ ಪ್ರದೇಶವು ವಾಸದ ಮನೆ ಕಟ್ಟತಕ್ಕ ಬಗ್ಗೆ ಉದ್ದೇಶಿಸಿರತಕ್ಕದ್ದೆಂಬುದನ್ನೂ ಮತ್ತು ಯಾವ ಪ್ರದೇಶವು ಇತರ ಕಟ್ಟಡಗಳನ್ನು ಕಟ್ಟತಕ್ಕ ಬಗ್ಗೆ ವಿಧಾಯಕಮಾಡಿರುತ್ತೆಂಬುದನ್ನೂ ಪ್ರೆಸಿಡೆಂಟರವರು ನಿರ್ಧರಿಸಿರಬೇಕು.

16. ಮನೆಗಳ ಸುತ್ತಮುತ್ತಿನ ಪಾಕೀಜು ವಿಚಾರ.—ಮನೆಗಳ ಸುತ್ತಮುತ್ತಿನ ಪಾಕೀಜು ವಿಚಾರ. ಪ್ರತಿಯೊಬ್ಬ ಮನುಷ್ಯನೂ ತನ್ನ ಮನೆಯನ್ನು ಮತ್ತು ಮನೆಗೆ ನೀರಿಂದ ಜಾಗವನ್ನು ಪಾಕ ಮಾಡಿಸಬೇಕು. ಪ್ರೆಸಿಡೆಂಟರವರು ಅಪ್ಪಣೆ ಮಾಡುವ ಅಳತೆ ರೀತ್ಯ ಮನೆಯ ಮತ್ತು ಕಾಂಪೌಂಡಿನ ನೀರು ಮತ್ತು ಇತರ ಗಲೀಜು ಬೀದಿಯ ಚರಂಡಿಗಳಿಗೆ ಹೋಗುವ ಹಾಗೆ ಅವುಗಳ ಮಟ್ಟಕ್ಕೆ ಸರಿಯಾಗಿ ಚರಂಡಿಗಳನ್ನು ಇಡಬೇಕು.

ಮನೆಯ ಮಾಲೀಕನು ಪ್ರೆಸಿಡೆಂಟರು ಸದರಿ ಚರಂಡಿಯನ್ನು ಕಟ್ಟಬೇಕೆಂದು ನೋಟೀಸ್ ಕೊಟ್ಟ 30 ದಿವಸಗಳೊಳಗೆ ಅವುಗಳನ್ನು ಕಟ್ಟಸಬೇಕು. ತಪ್ಪುದಲ್ಲಿ ಸದರಿ ಚರಂಡಿಗಳನ್ನು ಮುನಿಸಿಪಾಲಿಟಿಯ ರಾಗೋಡಿನಿಂದ ಕಟ್ಟಿಸಿ ನಂತರ ಆ ರಾಗೋಡನ್ನು ಮಾಲೀಕನಿಂದ ವಸೂಲ್‌ಮಾಡುವುದರಲ್ಲಿ ಬರುತ್ತೆ.

17. ಪಾಯಿಖಾನೆ ಮನೆಯ ಮೇಲ್‌ಭಾಗದಲ್ಲಿ ಕಟಡಗಳನ್ನು ಕಟ್ಟತಕ್ಕ ವಿಚಾರ.—ಕಕ್ಕಸಗಳ ಮೇಲೆ ಕೊಠಡಿಗಳನ್ನು ಯಾರೂ ಕಟ್ಟಕೂಡದು. ಹೀಗೆ ಕಕ್ಕಸಗಳ ಮೇಲಾಗಲೀ ಅಥವಾ ಹೊಸದಾಗಿ ಕಟ್ಟತಕ್ಕ ಕಕ್ಕಸಗಳ ಮೇಲಾಗಲೀ ಯಾವ ತರಹವಾದ ಕಟ್ಟಡಗಳನ್ನು ಯಾರೂ ಕಟ್ಟಕೂಡದು. ಆದರ ಬಲವಾದೆಗೆ ಹೋಗತಕ್ಕ ಬಗ್ಗೆ ಕಟ್ಟಿರತಕ್ಕ (closet) ಯಾನೆ ಕೊಠಡಿಗಳ ಮೇಲೆ ಅಂಥಾ closet ಯಾನೆ ಕೊಠಡಿಯನ್ನು ಕಟ್ಟಬಹುದು ಆದರೆ ಪ್ರೆಸಿಡೆಂಟರವರು ಹೇಳುವ ರೀತಿಯಲ್ಲಿ ಅವರು ಒಪ್ಪುವಂತೆ ಬಿದ್ರ ನೀರು ಸರಿಯಾಗಿ ಹೊರಗೆ ಹೋಗುವಂತೆ ಏರ್ಪಾಡು ಮಾಡಬೇಕು.

18. ಕಕ್ಕಸಗಳನ್ನು ಕಟ್ಟತಕ್ಕ ವಿಚಾರ.—ಮನೆಗೆ ಸಂಧಂದ ಪಡುವ ಹಾಗೆ ಯಾಗಲೀ ಸಂಬಂಧವಿಲ್ಲದೆ ಯಾಗಲೀ ಯಾವ ಮನುಷ್ಯನಾದರೂ ಪಾಯಿಖಾನೆಯು ಮನೆಯನ್ನು ಕಟ್ಟಿ ಬೇಕಾದಲ್ಲಿ ಪ್ರೆಸಿಡೆಂಟರವರು ಒಪ್ಪುವ ರೀತಿ ಮತ್ತು ಜಾಗದಲ್ಲೇ ಕಟ್ಟಬೇಕು. ಪಾಯಿಖಾನೆಯ ನೆಲವು ಸಮವಾಗಿಯೂ, ನುಣುಪಾಗಿಯೂ ನೀರು ಹೀರದಂತೆಯೂ ಇರಬೇಕಲ್ಲದೆ ನೆಲದಿಂದ 5 ಅಡಿ ಎತ್ತರಕ್ಕೆ ಗೋಡೆಗೆ ಸಿಮೆಂಟ್‌ಹಾಕಿ ಗಾರೆ ಮಾಡಬೇಕು.

19. ಪಾಯಿಖಾನೆ ಮನೆಗೂ ಬಾವಿಗೂ ಇರತಕ್ಕ ಫಾಸಲೆ ವಿಚಾರ.—ಮನೆಗೆ ಸಂಬಂಧಪಟ್ಟ ಪಾಯಿಖಾನೆಯನ್ನು ಕಟ್ಟಸಬೇಕಾದರೆ ಪ್ರೆಸಿಡೆಂಟರವರ ಅಪ್ಪಣೆ ಇಲ್ಲದೆ ಬಾವಿಗೆ ಅಥವಾ ಕುಡಿಯುವುದಕ್ಕೆ ನೀರನ್ನು ಉಪಯೋಗಿಸಬಹುದಾದ ಇತರ ಚಿಲುಮೆ ಅಥವಾ ಊಟೆಗಳ ಅಥವಾ ಮನುಷ್ಯರು ಕುಡಿಯುವುದಕ್ಕೆ ಮಾಡತಕ್ಕ ದ್ರಾವಕಗಳಿಗೆ ಉಪಯೋಗಿಸಬಹುದಾದ ನೀರಿನ ಸಮೀಪದಲ್ಲಾಗಲೀ 20 ಗಜಗಳ ವಳಿಗೆ ಕಟ್ಟಕೂಡದು.

20. ಪಾಯಿಖಾನೆ ಮನೆಗೆ ಪ್ರಾಳಿ ಬರತಕ್ಕ ವಿಚಾರ.—ಹೊಸದಾಗಿ ಕಟ್ಟುವಕ್ಕೆ ಒಂದು ಪಾಯಿಖಾನೆ ಕಟ್ಟಬೇಕಾದರೆ ಅಂಥಾ ಕಟ್ಟಡದಿಂದ ಸದರಿ ಪಾಯಿಖಾನೆ ಮನೆ ಸುತ್ತಲೂ 4 ಅಡಿಗ ಕಮ್ಮಿ ಇಲ್ಲದಂತೆ ಹೊರಗಿನ ಪಾಳಿ ಬರುವುದಕ್ಕೆ ಅನುಕೂಲಿಸುವಂತೆ ಮುಂದೆ ನಮೂದಿಸಿರುವ ಬಾಗಿಲು ಕಡೆ ಏನಾ ಬಾಕಿ ಕಡೆಯಲ್ಲಿ ಜಾಗವನ್ನು ಬಿಲ್ಲಾ ಬಿಡಬೇಕು. ಅಪರೆ ಅಂಥಾ ಪಾಯಿಖಾನೆ ಮನೆಗೆ ಹೋಗತಕ್ಕ ಬಗ್ಗೆ ಗ್ಯಾರಿ ಮನೆಯಾಗಲೀ ಅಥವಾ ವಾರಿಯಾಗಲೀ ಮಾಡತಕ್ಕ ಸಂದರ್ಭದಲ್ಲಿ ಇದು 3 ಅಡಿಗೆ ಕಮ್ಮಿ ಇಲ್ಲದಷ್ಟು ಅಗಲವಾಗಿಯೂ ಎರಡು ಪಕ್ಕದಲ್ಲಿಯೂ ಹೊರಗಿನ ಪಾಳಿ ಬರುವುದಕ್ಕೆ ಅನುಕೂಲಿಸುವಂತೆಯೂ ಇರಬೇಕು.

21. ಗೆಟ್ಟರ ಗುಂಡಿಗಳನ್ನು ಮತ್ತು ಪಾಯಿಖಾನೆ ಗುಂಡಿಗಳನ್ನು ಶುದ್ಧಿಮಾಡತಕ್ಕ ವಿಚಾರ.—ಮನೆಗೆ ನೀರಿಂದ ಭಾಗದಲ್ಲಿರತಕ್ಕ ಮತ್ತು ಸಮೀಪದಲ್ಲಿರತಕ್ಕ ಪಾಯಿಖಾನೆ ಮನೆ ಕಟಡಾ ನೀರು ಹೋಗುವುದಕ್ಕೆ ಮಾಡಿರತಕ್ಕ ಚರಂಡಿಗಳನ್ನು ಪ್ರೆಸಿಡೆಂಟರವರಿಂದ ನೋಟೀಸ್ ತಲ್ಪದ 3 ದಿವಸಗಳೊಳಗಾಗಿ ಶುದ್ಧಿಮಾಡಬೇಕು ಅವಶ್ಯಕವಿದ್ದಲ್ಲಿ ಸದರಿ ಕಾಲವನ್ನು ಪ್ರೆಸಿಡೆಂಟರವರು ವಿಳಂಬಿಸಬಹುದು.

22. ಪೂರ್ತಿಯಾಗಿ ಕಟ್ಟದೆ ಇರತಕ್ಕ ಮನೆಗಳನ್ನು ನೋಟೀಸ್ ಕೊಟ್ಟು ಒಂದು ವರ್ಷದೊಳಗಾಗಿ ಕಟ್ಟಬೇಕು.—ಹೊಸದಾಗಿ ಮನೆಯನ್ನು ಕಟ್ಟುವುದಕ್ಕೋಸ್ಕರ ಲೈಸೆನ್ಸು ಪಡದಿರತಕ್ಕ ಪ್ರತಿಯೊಬ್ಬ ಮನುಷ್ಯನೂ ಮೇಲೆ ಹೇಳಿದ ಬೈಲಾಗಳಿಗೆ ಅನುಗುಣವಾಗಿ ಮನೆಯನ್ನು ಪೂರೈಸಿ ಕಟ್ಟನೆ (, ತಿಂಗಳಿಗೆ ಮಾರಿದ ಅವಧಿಯ ತನಕಲೂ ಪೂರೈಸದೆ ಇದ್ದರೆ ಪ್ರೆಸಿಡೆಂಟರವರಿಂದ ವಿಧಿಸಬಹುದಾದ ಕಾಲಮೊಳಗೆ ನೋಟೀಸ್ ಜಾರಿಯಾದ ನಂತರ ಸದರಿ ಕಟ್ಟಡವನ್ನು ಕಟ್ಟಿ ಮುಗಿಸಬೇಕು ಅಂಥಾ ವಾಯಿದೆಯು ಒಂದು ವರ್ಷಕ್ಕೆ ಮೇಲ್ಪಟ್ಟರಕೂಡದು. ತಪ್ಪಿದಲ್ಲಿ ಮೈಸೂರು ಮುನಿಸಿಪಲ್ ರೆಗ್ಯುಲೇಷ್ ಸೆಕ್ಷನ್ 131ನೆ ಅನುಸರಿಸಿ ಸರಿಯಾದ ಮುಂದಿನ ಕ್ರಮ ಜರುಗಿಸಲು ಪ್ರೆಸಿಡೆಂಟರವರು ಅಧಿಕಾರವುಳ್ಳವರಾಗಿರುತ್ತಾರೆ.

23 ಮನೆಯನ್ನು ಕಟ್ಟತಕ್ಕ ಜನಗಳು ಬೇಕಾದ ವಿಚಾರವನ್ನು ತಿಳಿದುಕೊಳ್ಳಲು ಪ್ರೆಸಿಡೆಂಟರವರಿಗೆ ಬರೆದುಬೇಕಾದ ವಿಚಾರ.—ಯಾವ ಮನುಷ್ಯನೇ ಆಗಲೀ ಈ ರೂಲ್ಸುಗಳ ವಿಚಾರವಾಗಿ ಏನು ಅನುಮಾನ ಬಂದರೂ ಅಥವಾ ಯಾವ ವಿಚಾರವನ್ನು ತಿಳಿದುಕೊಳ್ಳಲು ಕಷ್ಟವಾದರೂ ತಾನು ಮನೆಯನ್ನು ಕಟ್ಟಬೇಕೆಂಬ ಉದ್ದೇಶವನ್ನು ಪ್ರೆಸಿಡೆಂಟರವರಿಗೆ ಲಿಖಿತಮೂಲಕವಾಗಿ ತಿಳಿಸುವುದಕ್ಕೆ ಮುಂಚೆ ಸದರಿ ಪ್ರೆಸಿಡೆಂಟರವರಿಗೆ ತನಗೆ ಬೇಕಾದ ವಿಚಾರವನ್ನು ಕುರಿತು ಬರದುಕೊಳ್ಳತಕ್ಕದ್ದು. ಅಮತು ಸದರಿ ಅರ್ಜಿ ತಲುಪಿದ ಒಂದು ವಾರದೊಳಗೆ ಸಂದರ್ಭಕ್ಕೆ ಅನುಗುಣವಾಗಿ ತಿಳುವಳಿಕೆಯನ್ನು ಕೊಡುವರು.

24. ರೈಸನ್ನು ಪರತ್ತುಗಳಿಗೆ ವಿರೋಧವಾಗಿ ಜಾಗ ಉಚಾಯಿಸಕೂಡದು. ಯಾವ ಮನುಷ್ಯನೇ ಆಗಲಿ ರೈಸೆನ್ನು ಪರತ್ತುಗಳಿಗೆ ವಿರೋಧವಾಗಿ ಜಾಗವನ್ನು ಉಚಾಯಿಸಿ ಮನೆ ಕಟ್ಟುವ ಭಾಗದಲ್ಲಿ ಪ್ರೆಸಿಡೆಂಟರವರಿಂದ ಕೊಡಲ್ಪಡಬಹುದಾದ ನೋಟೀಸ್ ಜಾರಿಯಾದ ರಾಗಾಯ್ತು ಒಂದು ತಿಂಗಳು ವಳಗಾಗಿ ಅರೀತಿ ಉಚಾಯಿಸಿರುವ ಜಾಗವನ್ನು ಖುಲ್ಲಾ ಮಾಡಿಕೊಡಬೇಕು ತಪ್ಪಿದಲ್ಲಿ ಮುನಿಸಿಪಾಲಿಟಿಯಿಂದ ಸದರಿ ಉಚಾಯಿಸಿರುವ ಭಾಗವನ್ನು ಖುಲ್ಲಾ ಮಾಡಿಸಲ್ಪಡುತ್ತೆ. ಮತ್ತು ಈ ಬಗ್ಗೆ ತಗಲುವ ರಾಗುವಾಡನ್ನು ಮನೆಯ ಮಾಲೀಕನಿಂದ ವಸೂಲ್‌ಮಾಡಲ್ಪಡುತ್ತೆ.

25. ಶಿಕ್ಷೆಯ ವಿಚಾರ.—ಯಾವ ಮನುಷ್ಯನೇ ಆಗಲೀ ಮೇಲೆ ಹೇಳಿದ ಯಾವುದೊಂದು ಬೈಲಾಗಳಿಗೆ ವಿರೋಧವಾಗಿ ನಡೆದಲ್ಲಿ ಮುನಿಸಿಪಲ್ ರೆಗ್ಯುಲೇಷನ್ 96 (5) ನೇ ಸೆಕ್ಷನ್ ರೀತ್ಯ ಮ್ಯಾಜಿಸ್ಟ್ರೇಟರವರ ಮುಂದೆ ತಪ್ಪು ಸಾಬೀತಾಗಿ 200 ರೂಪಾಯಿಗಳ ವಳಗೆ ದಂಡ ವಿಧಿಸುವುದರಲ್ಲಿ ಬರುತ್ತೆ.

ಪಿ ಕೃಷ್ಣರಾಜೇ ಅರಸ್
ಪ್ರೆಸಿಡೆಂಟ್ ಕಳಲಕಟ್ಟೆ ಮುನಿಸಿಪಾಲಿಟಿ

ಕಳೂರುಕಟ್ಟೆ ಟವ್ನ್ ಮೈನರ್ ಮುನಿಸಿಪಾಲಿಟಿಯಲ್ಲಿ ಚಪ್ಪರ ಮುಂತಾದ ಹಂಗಾಮಿ ಕಟ್ಟಡಗಳ ವಿಚಾರದಲ್ಲಿ 1906ನೆ ಇಸವಿ VIIನೇ ಮ್ಯುನಿಸಿಪಲ್ ರೆಗ್ಯುಲೇಷನ್ 48 (1) P ಸೆಕ್ಷನ್ ಪ್ರಕಾರ ವಿಧಿಸಬಹುದಾದ ಡ್ರಾಫ್ಟ್ ಬೈಲಾಗಳು.

ಈ ಬೈಲಾ ವಿಚಾರವಾಗಿ ತಕರಾರು ಮಾಡುವ ಯಾ ಸಲಹೆ ಕೊಡಬೇಕಾದವರಾದರೂ ಇದ್ದಲ್ಲಿ ಈ ನೋಟೀಸ್ ಪ್ರಕಟವಾಗಾಯ್ತು ಒಂದು ತಿಂಗಳೊಳಗಾಗಿ ಕಳೂರುಕಟ್ಟೆ ಟವ್ನ್ (ಮೈನರ್ ಮ್ಯುನಿಸಿಪಲ್ ಸಭೆಯವರಿಗೆ) ಅಥವಾ ಪ್ರೆಸಿಡೆಂಟರ ಆಫೀಸಿಗೆ ಲಿಖಿತಮೂಲಕವಾಗಿ ತಿಳಿಸತಕ್ಕದ್ದು.

1. ಲಗ್ನ ಮುಹೂರ್ತಗಳಿಗಾಗಲಿ ಅಥವಾ ಇತರ ಸಂದರ್ಭಗಳಲ್ಲಿ ಯಾಗಲಿ, ಮ್ಯುನಿಸಿಪಲ್ ಪ್ರೆಸಿಡೆಂಟರ, ಯಾ ವೈಸ್ ಪ್ರೆಸಿಡೆಂಟರ, ಬೆರತ ಮೊಲಕವಾಗಿ ಅಪ್ಪಣೆ ಪಡೆಯದೆ ಓಣಿಗಳಲ್ಲಾಗಲಿ ಅಥವಾ ಇತರ ಶಿರಗಾಡುವ ವಾರಿಯ ಮೇಲೆ ಯಾಗಲೀ ಅಥವಾ ಇತರ ಸ್ಥಳೀಶಗಳಲ್ಲಾಗಲಿ, ಅಥವಾ ಮನೆಗಳ ಮುಂಭಾಗದಲ್ಲಾಗಲಿ ಮ್ಯುನಿಸಿಪಲ್ ರಸ್ತೆ ಮತ್ತು ಚರಂಡಿಗಳ ಮೇಲೆ ಚಪ್ಪರಗಳನ್ನಾಗಲೀ ಅಥವಾ ಇತರ ಹಂಗಾಮಿ ಕಟ್ಟಡಗಳನ್ನು ಕಟ್ಟಕೂಡದು ಇಂಥ ಕಟ್ಟಡ ಚಪ್ಪರಗಳನ್ನು ಕಟ್ಟಲು ಅಪೇಕ್ಷಿಸುವವರು ಕಟ್ಟಡಕ್ಕೆ ಸ್ವಲ್ಪ ಅಳತೆ ಮತ್ತು ಇತರ ತಪ್ಪಿಲು ನಮೂದಿಸಿದ ಈ ಕೆಳಗೆ ನಮೂದಿಸಿರುವ ದರವೆಂದೆ ಫೀಜು ಸಲ್ಲಿಸಿ ಅಪ್ಪಣೆ ಪಡೆಯಲು ಅರ್ಜಿ ಹಾಜರುಮಾಡಿದ್ದೊಡನೆಯೇ ಯಾವ ವಿಧವಾದ ಅಪ್ಪಣೆಯೂ ಕೊಡುವಾರದೆ ಇಪ್ಪಲ್ಲಿ ಅವರಿಗೆ ಸೂಕ್ತ ತೋರಲಂತೆ ಜನಗಳ ಅನುಕೂಲತೆ ಮತ್ತು ನೆಮ್ಮದಿಗೆ ಅವಶ್ಯಕ ತೋರುವ ಷರತ್ತು ಅನುಸರಿಸಿ ಪ್ರೆಸಿಡೆಂಟರು ಯಾ ವೈಸ್‌ಪ್ರೆಸಿಡೆಂಟರಿಂದ ಲೈಸೆನ್ಸ್ ಕೊಡಲ್ಪಡುತ್ತ.

		ರೂ	ಅ.	ಪೈ
1.	ಮದುವೆ ಚಪ್ಪರಕ್ಕೆ	1	0	0
2.	ಇತರೆ ಚಪ್ಪರಗಳಿಗೆ	0	8	0
3.	ನಾಟಕ ಪೆಗ್ಮೆರೆ ಚಪ್ಪರಗಳಿಗೆ	2	0	0
4.	ಮನೆಯ ಮುಂಭಾಗದಲ್ಲಿ ಹಂಗಾಮಿಯಾಗಿ ಹಾಕತ್ತ ಚಪ್ಪರಕ್ಕೆ ನಾಲಯಾನಾ ಒಂದು ಚದರ ಅಡಿಗೆ	0	1	0

2. ರಸ್ತೆಯ ಅಗಲದಲ್ಲಿ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿ ಚಪ್ಪರವನ್ನು ಹಾಕಕೂಡದು.

3(a) ಯಾವ ಚಪ್ಪರವನ್ನೂ 15 ದಿವಸಗಳಿಗಿಂತಲೂ ಜಾಸ್ತಿಯಾಗಿ ಇಡಕೂಡದು. ಆದರೆ ಮೊದಲು ಕೊಟ್ಟ ಫೀಜಿನಲ್ಲಿ ಅರ್ಧ ವರವಾರ ಫೀಜು ಕೊಟ್ಟು ಕೇಳಿಕೊಂಡಲ್ಲಿ ಹೆಚ್ಚುವರಿಯಾಗಿಯೂ ಒಂದು ತಿಂಗಳಿಗೆ ಜಾಸ್ತಿಯಾಗದಂತೆ ವಾಯಿದೆ ಕೊಡಬಹುದು. ಆದರೆ ಮನೆಗಳ ಮುಂದಾಗದಲ್ಲಿ ಆಗಲಿ ಅಥವಾ ಸುತ್ತಲೂ ಆಗಲೀ ಅವರವರ ಸ್ವಂತ ಜಾಗದಲ್ಲಿ ಹಂಗಾಮಿ ಷಡ್ಡುಗಳನ್ನು ಪ್ರೆಸಿಡೆಂಟರವರ ಅಪ್ಪಣೆಯನ್ನು ಪಡದು ಆರುತಿಂಗಳಿಗೆ ಮೀರದಂತೆ ರಿಯಾಯತಿ ಲೈಸನ್ಸನ್ನು ಪಡೆಯಬಹುದು. ಪ್ರೆಸಿಡೆಂಟರವರು ಸೂಕ್ತ ತೋರುವ ಷರತ್ತುಗಳನ್ನು ಹಾಕಿ ಲೈಸನ್ಸನ್ನು ಕೊಡಬಹುದು.

(b) ಲೈಸೆನ್ಸಿನಲ್ಲಿ ನಮೂದಾದ ವಾಯಿದೆ ಅಥವಾ ಅಪೇಕ್ಷೆಕ್ಷ ಕೊಟ್ಟು ಪಡೆದುಕೊಂಡ ಜಾಸ್ತಿ ವಾಯಿದೆಯಲ್ಲಿ ಹಾಕಿದ ಚಪ್ಪರ ಅಥವಾ ಹಂಗಾಮಿ ಕಟ್ಟಡವನ್ನು ಕಟ್ಟಿದವರು ಕೆಡಗದು ಹಾಕದೆ ಹೋದಲ್ಲಿ ಪ್ರೆಸಿಡೆಂಟರು ಅಥವಾ ವೈಸ್‌ಪ್ರೆಸಿಡೆಂಟರು ಅಂಥವರಿಗೆ ಅವರಿಗೆ ಸೂಕ್ತತೋರುವ ವಾಯಿದೆ ನಮೂದಿಸಿಂದ ಕಿತ್ತು ಹಾಕಲು ಒಂದು ನೋಟೀಸ್ ಕೊಟ್ಟು ಆ ವಾಯಿದೆಯಲ್ಲಿಯೂ ಕಿತ್ತು ಹಾಕದೆ ಹೋಗುವ ಭಾಗದಲ್ಲಿ ಅವರು ಅವನ್ನು ಕಿತ್ತು ಹಾಕಿಸಿ ಅದರ ರಾಗುವಡೆನ್ನು ತಪ್ಪಿ ಹೋದವರಿಂದ ಅಂಥಾ ರಾಗುವಾಡೆನ್ನು ವಸೂಲ್ ಮಾಡಲ್ಪಡುತ್ತ.

4. ಈ ಸಂಬಂಧನೆಗಳಿಗೆ ವಿರೋಧವಾಗಿ ಯಾರಾದರೂ ತಪ್ಪು ಸಡೆಯುವ ಭಾಗದಲ್ಲಿ ಅಂಥವರಿಗೆ ಮೊದಲನೇ ತಪ್ಪಿತಕ್ಕೆ ೨ ರೂಪಾಯಿಗಳನ್ನು ಆ ಮುಂದೆ ಪ್ರತಿ ತಪ್ಪಿತಕ್ಕು 10 ರೂಪಾಯಿಗಳಂತೆ ಜುರ್ಮಾನೆ ವಿಧಿಸುತ್ತೆ.

ಟಿಪ್ಪಣಿ.—ಈ ಸಂಬಂಧನೆಯು ಮೊಹರಂ ದಸರಾ ಮುಂತಾದ ಕಾಲಗಳಲ್ಲಿ ಹಾಕತಕ್ಕ ಪಬ್ಲಿಕ್ ಚಪ್ಪರಗಳಿಗೆ ಅನ್ವಯಿಸುವುದಿಲ್ಲ.

ಪಿ. ಕೃಷ್ಣರಾವ್,
ಪ್ರೆಸಿಡೆಂಟ್ ಮ್ಯುನಿಸಿಪಲ್ ಕೌನ್ಸಿಲ್ ಕಳೂರು ಕಟ್ಟೆ.

ಕಳೂರುಕಟ್ಟೆ ಟವ್ನ್ ಮೈನರ್ ಮ್ಯುನಿಸಿಪಾಲಿಟಿ.

ಜನನ-ಮರಣ ಪಾಬತಿ ಇಡುವುದನ್ನು ಕುರಿತು ಕಳೂರುಕಟ್ಟೆ ಮ್ಯುನಿಸಿಪಲ್ ಕೌನ್ಸಿಲ್‌ನಿಂದ ಪಾಸ್ಟ್ ಆದ ಉಪಕಾನೂನುಗಳು ಪ್ರಜೆಗಳ ತಿಳುವಳಿಕೆ ಬಗ್ಗೆ ಇದರಡಿ ಪ್ರಕಟಿಸಲ್ಪಟ್ಟಿದೆ. ಮ್ಯುನಿಸಿಪಲ್ ರೆಗ್ಯುಲೇಷನ ಸೆಕ್ಷನ್ 48 (ಜಿ) ಅನುಸರಿಸಿ ಜನನ-ಮರಣ ಪಾಬತಿ ಇಡುವುದನ್ನು ಕುರಿತು ತಯಾರಿಸಲ್ಪಟ್ಟ ಉಪಕಾನೂನುಗಳು (Bye-laws).

1. ಟವ್ನಿನೊಳಗೆ ಉಂಟಾಗುವ ಎಲ್ಲಾ ಜನನ-ಮರಣಗಳ ಪಾಬತು ಒಂದು ರಿಜಿಸ್ಟರು ಇಡಲ್ಪಡಬೇಕು ಮತ್ತು ಆ ಬಗ್ಗೆ ಜನನ-ಮರಣಗಳ ಸಬ್ ರಿಜಿಸ್ಟ್ರಾರನು ಒಬ್ಬನು ನೇಮಕವಾಗತಕ್ಕದ್ದು. ಸದ್ಯಕ್ಕೆ ಮ್ಯುನಿಸಿಪಲ್ ಆಫೀಸು ಸದರೀ ಪಾಬತಿ ಇಡತಕ್ಕ ಬಗ್ಗೆ ಸ್ಥಳವಾಗಿಯೂ (Office of Registry) ಪಟೇಲರೇ ಸಬ್ ರಿಜಿಸ್ಟ್ರಾರನಾಗಿಯೂ ಇರತಕ್ಕದ್ದು. ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಸಹ ಬರೆಯಲ್ಪಟ್ಟಿರುವ ಮತ್ತು ಸದರೀ ಕಟ್ಟಡದ ಬಹಿರಂಗವಾದ ಒಂದು ಸ್ಥಳದಲ್ಲಿ (In a conspicuous place) ಚಿಕಟಾಯಿಸಲ್ಪಟ್ಟಿರುವ ಪ್ರಕಟಣೆಯೊಂದು ಈ ವಿದ್ಯಮಾನಗಳನ್ನು ಜನಗಳಿಗೆ ತಿಳಿಯಪಡಿಸತಕ್ಕದ್ದು.

2. ಮಲಪೂಜಿ (Appended) ಷೆಡ್ಯೂಲಿನಲ್ಲಿ ತೋರಿಸಲ್ಪಟ್ಟಿರುವ ನಮೂನೆಯಲ್ಲಿರುವ ಪುಸ್ತಕಗಳಲ್ಲಿ ಎಲ್ಲಾ ಜನನ-ಮರಣಗಳೂ ಪಾಬತಿ ಇಡತಕ್ಕದ್ದು. (Registered) ಮತ್ತು ಈ ಪುಸ್ತಕಗಳನ್ನು ಮ್ಯುನಿಸಿಪಲ್ ಆಫೀಸಿನಲ್ಲಿ ಹಾಜರು ಮಾಡತಕ್ಕದ್ದು.

3. ಸದರೀ ಸಬ್ ರಿಜಿಸ್ಟ್ರಾರನು ಮ್ಯುನಿಸಿಪಾಲಿಟಿಯ ಒಳಗೆ ಸಂಭವಿಸುವ ಪ್ರತಿಯೊಂದು ಜನನವನ್ನು ಮರಣವನ್ನು ಸೂಕ್ಷ್ಮವಾಗಿ ತಿಳಿಯಬೇಕಲ್ಲದೆ ಸದರೀ ವಿದ್ಯಮಾನವು (Event ಸಂಭವ) ಸಂಭವಿಸಿದ ತರುವಾಯ ಅನುಕೂಲವಾದಷ್ಟು ಶೀಘ್ರವಾಗಿ ಯಾವ ರುಸುಮನ್ನಾಗಲೀ ಬಹುಮಾನವನ್ನಾಗಲೀ ಪಡೆಯದೆ ಅಂಥಾ ಪ್ರತಿಯೊಂದು ಜನನಕ್ಕಾಗಲೀ ಮರಣಕ್ಕಾಗಲೀ ಸಂಗತ್ಯಾನುಸಾರವಾಗಿ (As the case may be) ಸಂಬಂಧಪಟ್ಟ ಸದರೀ ಷೆಡ್ಯೂಲಿನ ನಮೂನೆಯ ಮೇರೆಗೆ ದಾಖಲೆಗೆ ಅಗತ್ಯವಾದ ಮತ್ತು ಅದುವರೆಗೆ ದಾಖಲೆ ಆಗದೆ ಅಥವಾ ರಿಜಿಸ್ಟರ್ ಆಗದೆ ಇರುವ ಎಲ್ಲಾ ತಪ್ಪಿಲುಗಳನ್ನು ದಾಖಲು ಮಾಡತಕ್ಕದ್ದು.

4 ಪ್ರತಿಯೇ ಪುಸ್ತಕಗಳಲ್ಲಿ ಅದಂತ್ಯವಾಗಿ ಒಂದಾದ ನಂತರ ಮತ್ತೊಂದರಂತೆ (Consecutively) ಅಂಥಾ ಎಲ್ಲಾ ವಾಜಲರಾತಿಗಳನ್ನೂ ಹಾಕಲ್ಪಟ್ಟು ಪಡೆಯಬೇಕು.

5 ಮ್ಯುನಿಸಿಪಾಲಿಟಿಯ ಒಳಗೆ ಹುಟ್ಟಿದ ಪ್ರತಿಯೊಂದು ಶಿಶುವಿನ ತಂದೆಯಾಗಲೀ ತಾಯಿಯಾಗಲೀ ಅಥವಾ ಇತರ ಪುರುಷ ಬಂಧು (Male relative) ಆಗಲೀ ಅಥವಾ ತಂದೆ ತಾಯಿ ಮತ್ತು ಇತರ ಪುರುಷ ಬಂಧುಗಳು ಪ್ರಾತಿಯಾಗಿರುವ ಕಾಯಿಲೆಯಾಗಿರುವ ಅಥವಾ ಗೈರ್‌ಹಾಜರ್ ಆಗಿರುವ ಸಂದರ್ಭದಲ್ಲಿ ಸದರೀ ಸ್ಥಳದಲ್ಲಿ ಹಾಜರಿದ್ದ ಅಥವಾ ಉಪಚರಿಸಿದ (Attended) ವೈದ್ಯ (Medical Attendant) ನಾಗಲೀ ಸೂಲಗಿತ್ತಿಯಾಗಲೀ ಅಂಥಾ ಜನನವಾದ ದಿನದಿಂದ ಲಾಗಾಯ್ತು ಒಂದು ವಾರದ ಒಳಗೆ ಸದರೀ ಶಿಶುವಿನ ಜನನದ ವಿಷಯವಾಗಿ ತಿಳಿಯಲ್ಪಡಲು ಮತ್ತು ರಿಜಿಸ್ಟರ್ ಮಾಡಲ್ಪಡಲು ಈ ಮುಂಲಿಕ ಅಗತ್ಯವಾದ ಅನೇಕ ತಪ್ಪೀಲುಗಳ ಬಾಬತು ಅವನ ಅಥವಾ ಅವಳ ಸ್ವಂತವಾದ ತಿಳುವಳಿಕೆಯಿಂದ ಮತ್ತು ನಂಬಿಕೆ ಯಿಂದ ಎಷ್ಟು ಪರ್ಯಾಪ್ತವಾದ ತಿಳಿಸಬಹುದೋ ಅಷ್ಟನ್ನು ಸಬ್ ರಿಜಿಸ್ಟ್ರಾರವರಿಗೆ ಕೊಡತಕ್ಕದ್ದು ಅಥವಾ ಹಾಗೆ ಕೊಡಲ್ಪಡಲು ಕಾರಣವಾಗತಕ್ಕದ್ದು (Cause to be given).

6. ಮ್ಯುನಿಸಿಪಾಲಿಟಿಯೊಳಗೆ ಮರಣ ಹೊಂದುವ ಪ್ರತಿಯೊಬ್ಬ ಮನುಷ್ಯನ ಉತ್ಕ್ರಮಣ ಕಾಲದಲ್ಲಿ ಹಾಜರಿದ್ದ ಅಥವಾ ಕೊನೆಗಾಲದ ಕಾಯಿಲೆಯ ಹೊತ್ತಿನಲ್ಲಿ ಉಪಚರಿಸಿದ (Attended) ಯಾವನಾದರೊಬ್ಬ ಸಮೀಪಬಂಧು (Some near relative) ನಾಗಲೀ ಅಥವಾ ಅಂಥಾ ಎಲ್ಲಾ ಬಂಧುಗಳೂ ಮರಣ ಹೊಂದಿರುವ, ಕಾಯಿಲೆಯಾಗಿರುವ, ಅಸಮರ್ಥರಾಗಿರುವ (Inability) ಅಥವಾ ತಪ್ಪು. (In default ಸಂದರ್ಭದಲ್ಲಿ ಸದರೀ ಕಟ್ಟಡವನ್ನು ಆಕ್ರಮಿಸಿಕೊಂಡಿರುವವನಾಗಲೀ (Occupier) ಅಥವಾ ಸದರೀ ಆಕ್ರಮಿಸಿಕೊಂಡಿದ್ದವನು ಪ್ರಾತಿಯಾಗಿರುವ ಪಕ್ಷದಲ್ಲಿ ಅಂಥಾ ಮರಣವು ಸಂಭವಿಸಿರುವ ಕಟ್ಟಡ ದಲ್ಲಿ ವಾಸಿಸುವ ಯಾರಾದರೊಬ್ಬ ಮನುಷ್ಯನಾಗಲೀ 24 ಘಂಟೆಗಳೊಳಗೆ ಪ್ರತಿಯೊಬ್ಬ ಮನುಷ್ಯನ ಮರಣದ ವಿಷಯವಾಗಿ ತಿಳಿಯಲ್ಪಡಲು ಮತ್ತು ರಿಜಿಸ್ಟರ್ ಮಾಡಲ್ಪಡಲು ಈ ಮುಂಲಿಕ ಅಗತ್ಯವಾದ ಅನೇಕ ತಪ್ಪೀಲುಗಳ ಬಾಬತು ಅವನ ಅಥವಾ ಅವಳ ಸ್ವಂತವಾದ ತಿಳುವಳಿಕೆಯಿಂದ ಮತ್ತೂ ನಂಬಿಕೆಯಿಂದ ಎಷ್ಟು ವರ್ತಮಾನ ತಿಳಿಸಬಹುದೋ ಅಷ್ಟನ್ನು ಸಬ್ ರಿಜಿಸ್ಟ್ರಾರ ನಿಗೆ ಕೊಡತಕ್ಕದ್ದು ಅಥವಾ ಹಾಗೆ ಕೊಡಲ್ಪಡಲು ಕಾರಣವಾಗತಕ್ಕದ್ದು.

7. ಯಾವುದೊಂದು ಪಬ್ಲಿಕ್ ಇಸ್ಟಿಟ್ಯೂಷನ್ನಲ್ಲಿ ಜನ ಸಾಮಾನ್ಯದ ಪ್ರಯೋಜನಾರ್ಥವಾಗಿ ಸ್ಥಾಪಿಸಲ್ಪಟ್ಟ ಬಹಿರಂಗ ವಾದ ಒಂದು ಸ್ಥಳ ಉಂಟಾಗಿರುವ ಜನನ ಅಥವಾ ಮರಣದ ಸಂದರ್ಭದಲ್ಲಿ, ಅಂಥಾ ಜನನ ಮರಣಗಳ ವಿಷಯವಾಗಿ 5 ಮತ್ತು 6ನೇ ಉಪಕಾನೂನುಗಳ ಮೇರೆಗೆ ಅಗತ್ಯವಾದ ತಿಳುವಳಿಕೆಯನ್ನು ಸಬ್ ರಿಜಿಸ್ಟ್ರಾರಿಗೆ ಕೊಡುವುದು ಅಥವಾ ಹಾಗೆ ಕೊಡಲಿಕ್ಕೆ ಕಾರಣವಾಗತಕ್ಕದ್ದು, ಸದರೀ ಸ್ಥಳದ ಚಾರ್ಜಿನಲ್ಲಿರುವ ನೌಕರನ ಅಥವಾ ಇತರ ಮನುಷ್ಯನ ಕರ್ತವ್ಯವಾಗಿರತಕ್ಕದ್ದು.

8. ಜನನ-ಮರಣ ವಿಷಯವಾದ ಮಲಪೂಫಿ ಪೆಡ್ಯೂಲಿನಲ್ಲಿ ಕಂಡ ಫಾರಂಗಳಲ್ಲಿ ಬರಹ ಮೂಲಕವಾಗಿ ಕೊಡಲು ಅವ ಕಾಶ ಕೊಡಲ್ಪಡಬಹುದು. ಸದರೀ ಪಾರಮಿನ ಅಚ್ಚಾದ ಪ್ರತಿಗಳು ಕಳೆಯಾಗಿರಬಹುದಾದ್ದರಿಂದ ಮ್ಯುನಿಸಿಪಾಲಿಟಿಯ ಆಫೀಸಿನಲ್ಲಿಯೂ ಎಲ್ಲಾ ಕೌನ್ಸಿಲರುಗಳ ಬಳಿಯಲ್ಲಿಯೂ ಸ್ಯಾನಿಟರಿ ಇನ್‌ಸ್ಪೆಕ್ಟರವರಲ್ಲಿಯೂ ಪಬ್ಲೀಕ್ ಶ್ಯಾನುಭೋಗರ ಸಂಗಡಲೂ ದೊರೆಯುವುದು.

9. ಸದರೀ ದಾಖಲೆಗಳನ್ನು ಇಡಲಿಕ್ಕೆ ಗೊತ್ತಾದ ಸ್ಥಳದಲ್ಲಿ (Office of Registry) ಒಂದು ನೋಟಿಸ್ ತಪ್ಪಿಸಿ ದಲೆ ಸ್ಯಾನಿಟರಿ ಇನ್‌ಸ್ಪೆಕ್ಟರವರು ಸದರೀ ಸ್ಥಳವನ್ನು ಭೇಟಿಮಾಡಿ ಅಂಥಾ ನೋಟೀಸಿನಲ್ಲಿ ನಮೂದಾಗಿರುವ ಅನೇಕ ತಪ್ಪೀಲುಗಳ ನಿಜಾಂಶ (Accuracy) ವ ಬಗ್ಗೆ ವಿಚಾರ ಮಾಡತಕ್ಕದ್ದು ಮತ್ತು ಕಂಡುಬಂದಿರಬಹುದಾದ (That may have been discovered) ಯಾವ ತಪ್ಪನ್ನಾಗಲೀ ದುರಸ್ತುಪಡಿಸಿಕೊಂಡ ತರುವಾಯ ರಿಜಿಸ್ಟರಿನಲ್ಲಿ ಸದರೀ ದಾಖಲಾತಿ (Entry) ಯ ಮುಂದೆ ಅಂಥಾ ತನಿಖೆಯನ್ನು ತಾನು ನಡೆಸಿದ್ದಕ್ಕೆ ಗುರುತಾಗಿ ತನ್ನ ಚಿಕ್ಕ ರುಜು (Initials) ವನ್ನು ಮಾಡತಕ್ಕದ್ದು.

10. ಮ್ಯುನಿಸಿಪಾಲಿಟಿಯೊಳಗೆ ಸತ್ತಿರುವ ಯಾವನೊಬ್ಬನಿಗಾಗಲೀ ಉತ್ತರ ಕ್ರಿಯೆಗಳನ್ನು ಮಾಡುವ ಅಥವಾ ಮಾಡಿ ಸುವ ಪ್ರತಿಯೊಬ್ಬನೂ ಸಬ್ ರಿಜಿಸ್ಟ್ರಾರಿಗಾಗಲೀ, ಅಥವಾ ಈ ಬಗ್ಗೆ ಅಧಿಕಾರ ಕೊಡಲ್ಪಟ್ಟಿರುವ ಯಾವನೊಬ್ಬನಾಗಲೀ ಪೋರಿ ದಾಗಲೆಲ್ಲಾ ಮೇರೆ ಹೇಳಲ್ಪಟ್ಟ ಅನೇಕ ತಪ್ಪೀಲುಗಳ ಬಾಬತು ತನಗೆ ತಿಳಿದಿರುವಂಥಾ ವಿದ್ಯಮಾನಗಳನ್ನು ಒದಗಿಸಿಕೊಡತಕ್ಕದ್ದು.

11. ಹಿಂದಿನ ಪ್ರಕರಣಗಳ (Paragraphs) ಮೇರೆಗೆ ತಿಳುವಳಿಕೆ ಕೊಡತಕ್ಕದ್ದನ್ನು ಕರ್ತವ್ಯವಾಗಿ ಉಳ್ಳ ಮತ್ತು ಅಂಥಾ ತಿಳುವಳಿಕೆಯನ್ನು ಕೊಡುವ ಕಾರ್ಯದಲ್ಲಿ ಅಲಕ್ಷ್ಯಮಾಡುವ (Neglects) ಅಥವಾ ತಿರಸ್ಕರಿಸುವ (Refuses) ಅಥವಾ ಸುಳ್ಳು ವರ್ತಮಾನವನ್ನು ಕೊಡುವ ಯಾವನೊಬ್ಬ ಮನುಷ್ಯನೂ, ಒಬ್ಬ ಮ್ಯಾಜಿಸ್ಟ್ರೇಟನ ಮುಂದೆ ತಪ್ಪು ನಾಬೀತಾ ದೊಡನೆ (On conviction before a Magistrate) 10 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾ ಗುತ್ತಾನೆ.

12 ಜನನ-ಮರಣದ ರಿಜಿಸ್ಟರಿನಿಂದ ತೆಗೆಯಲ್ಪಟ್ಟ ಎಲ್ಲಾ ಸಾರಾಂಶ (Extract) ಗಳು ಪ್ರೆಸಿಡೆಂಟರಿಂದಾಗಲೀ ವೈಸ್ ಪ್ರೆಸಿಡೆಂಟರಿಂದಾಗಲೀ ರುಜು ಮಾಡಲ್ಪಟ್ಟು ಕೌನ್ಸಿಲನ ಮುದ್ರೆಯಿಂದ ಒತ್ತಲ್ಪಟ್ಟಿರತಕ್ಕದ್ದು. ಅಲ್ಲದೆ ಈ ಬಾಬತು ಪಾವತಿಯಾಗಬೇಕಾದ ರುಸುಂಗಳು (Fees) ರೆವಿನ್ಯೂ ಕಾಗದ ಪತ್ರಗಳಲ್ಲಿ ಹೇಗೋ ಹಾಗೆ ಅದೇ ಸಂಬಂಧನೆಗಳನ್ನು ಅನುಸರಿಸಿ ವಿಧಾಯಿಸಲ್ಪಡತಕ್ಕದ್ದು.

13 ಜನನಕ್ಕೆ ಸಂಬಂಧಪಟ್ಟ ರಿಜಿಸ್ಟರಿನ (Extract) ಗಳು ಆ ಬಾಬತು ತಿಳುವಳಿಕೆ ಕೊಟ್ಟವನಿಂದ (In formant) ಅಪೇಕ್ಷಿಸಲ್ಪಟ್ಟರೆ ಸಬ್ ರಿಜಿಸ್ಟ್ರಾರವರಿಂದ ಮುಪತ್ತಾಗಿ (Free of cost) ಅವನಿಗೆ ಕೊಡಲ್ಪಡಬಹುದು.

DEFINITIONS.

ಅರ್ಥವಿವರಣೆಗಳು.

"Occupier" ಎಂದರೆ ಆಕ್ರಮಿಸಿಕೊಂಡಿರುವವನು, ಎಂಬ ಹದವು. ಗೃಹರಕ್ಷಕ (Keeper) ಯಜಮಾನ ಮತ್ತು ತರಿಯಳಾದ ಹೆಂಗಸು, (Matron) ಸೂಪರಿಟೆಂಡೆಂಟ್ ಯಾವ ಮೇಲ್ವಿಚಾರಣೆ ಯಾ ಅಧಿಕಾರವೈಖರಿಯನ್ನು ಅಥವಾ ಯಾವು ದೊಂದು "ಪಬ್ಲಿಕ್ ಇಸ್ಟಿಟ್ಯೂಷನ್" ನ ಉಸ್ತುವಾರಿಯಲ್ಲಿ ವಿರತಕ್ಕ, ನೌಕರ ಮಂಬೀ ಅಧಿಕಾರಿಗಳನ್ನೂ ಒಳಗೊಂಡಿರುವಾಗ ಮತ್ತು ಒಂದು ಮನೆಯ ಪ್ರತ್ಯೇಕ ಭಾಗಗಳಾಗಿ (Apartments) ಅಥವಾ ಬಿಡಾರಗಳಾಗಿ (Lodgings) ಬಾಡುಕೆಯಿಟ್ಟಿಲ್ಲದೆ ಆಗಾಗ ಪದರೀ ಜಾಹೀರು ಅಂಥಾ ಮನೆಯಲ್ಲಿ ವಾಸಿಸಿದವ ಮತ್ತು ಯಾವುದೇ ಕೈಕೆಳಗೆ ಸದರೀ ಬಿಡಾರಗಳು ಅಥವಾ ಪ್ರತ್ಯೇಕ ಭಾಗ ಗಳು ಮತ್ತೆ ಯಾರ ಮಧ್ಯಸ್ಥಿಗೂ ಒಳಪಡದೆ ಹಿಡುವಳಿಯಾಗಿವೆಯೋ (Under immediate hold) ಆತನಿಂದಲೂ ಆವರ ಮುಖ್ತಾರೀದಾರರಿಂದಲೂ (Agents) ಸಹ ಒಳಪಡಿಸಿಕೊಳ್ಳುತ್ತದೆ.

" Public Institution " ಎಂದು ಹೆಸರು, ಜೈಲು (Prison) ಲಾಕಪ್‌ಗಳು (Look-up) ಆಸ್ಪತ್ರೆ, ಶಾಲೆಗಳ ಅಧಿಕಾರಿಗಳು, ಶಾಸ್ತ್ರಿಯರು, ಎಂಬ ಹಾಗೆ ಮತ್ತೊಂದು ಸಂಸ್ಥೆಯನ್ನು ಸಂಬಂಧಪಡಿಸಿ ಮಾತಾಡಿದ್ದಲ್ಲಿ ಹೆಸರು, ಅಧಿಕಾರಿಗಳ ಸಾಲಾಗಳು, ಬ್ಯಾರಕ್ಸ್ (Barracks) ಎಂಬ ಮಾತುಗಳಿಂದಲೂ ಸ್ಪಷ್ಟ. ಮುನಿಸಿಪಾಲಿಟಿ ಒಂದು ಪಬ್ಲಿಕ್ ಬಾಡಿ (Public body) ಒಟ್ಟು ನಿಯಮ ಅಥವಾ ಇತರ ಮನುಷ್ಯನ ಮ್ಯಾನೇಜ್‌ಗೆ (Management) ಒಳಪಟ್ಟಿರುವ ಯಾವುದೇ ಧರ್ಮ ಶಾಲೆಗಳು ಸಂಬಂಧಪಟ್ಟ ಅಥವಾ ಇತರ ಸ್ಥಳಗಳು—ಇವುಗಳನ್ನು ಅಧಿಕಾರಿಗಳು ಅರಿತುಕೊಳ್ಳುವುದು :—

' ಸ್ಟಿಲ್ ಬರ್ತ್ " (Still-birth) ಎಂದರೆ ಸಾಯ್ದ ಮಗು ಎಂದು ಹೆಸರು. ಗರ್ಭಧಾರಣೆ (Gestation) ಯಾದ 28ನೆಯ ವಾರದ ನಂತರ ಸಂಭವಿಸಿದಲ್ಲಿ (As dead) ಮತ್ತು ಹುಟ್ಟುವಾಗ (ಅಥವಾ) (Not called back to life) ಇರುವ ರೀತಿಯಲ್ಲಿ ಮಗುವಾದ ಹೊರಗೆ ಆಗ್ಬೇಕಾಗುತ್ತದೆ

ಫಾರಂನಲ್ಲಿ ಮ್ಯಾನೇಜರ್‌ಆಯ್ಕೆ 192 ನೇ ಇದರ ಮಾಸಿಕ ಶಾಲೆಯಲ್ಲಿ ಆದ ಜನನಗಳ (ಮರಣ) ರಿಜಿಸ್ಟರ್

ಜನನದ ಕ್ರಮಸಂಖ್ಯೆ ಮತ್ತು ಗಂಡು ಅಥವಾ ಹೆಣ್ಣು	ಜನನ ಆದ ದಿನಾಂಕ	ಹೆಸರು ಜಾತಿ	ತಂದೆಯ ಜಾತಿ	ಜೀವಂತ ಜನನ		ಸ್ಟಿಲ್ ಬರ್ತ್ ಆದಲ್ಲಿ ಎಷ್ಟು ದಿನದ ಗರ್ಭ	ತಾಯಿಯ ಸಂಖ್ಯೆ	ತಾಯಿಯ ಹೆಸರು ಮತ್ತು ಅಡ್ರೆಸ್	ಸೂಲಗಿತ್ತಿಯ ಅಥವಾ ಡಾಕ್ಟರರ ಹೆಸರು	ಷರಾ
				ಗಂಡು	ಹೆಣ್ಣು					
1	2	3	4	5	6	7	8	9	10	11

N.B.—ಜನನದ ತಾರೀಖು ರಾತ್ರಿಯಾದರು ಮುಂದಿನ ಒಂದು ವಾರದ ಒಳಗಾಗಿ ಈ ರಿಜಿಸ್ಟರ್ ತುಂಬಬೇಕು.

" ಮರಣ ಹೊಸ್ಮಠ ಹೋರು ಮತ್ತು ಸಾವಾಸ "

ಫಾರಂನಲ್ಲಿ ಮ್ಯಾನೇಜರ್‌ಆಯ್ಕೆ 192 ನೇ ಇದರ ಮಾಸಿಕದಲ್ಲಿ ಸಂಭವಿಸಿದ ಮರಣಗಳ (ರಿಜಿಸ್ಟರ್) (ಮರಣ).

ಮರಣದ ಕ್ರಮ ಸಂಖ್ಯೆ	ಮೃತ ವ್ಯಕ್ತಿಯ ಅಡ್ರೆಸ್	ಹೆಸರು	ಜಾತಿ	ವಯಸ್ಸು			ಸಾವಿಗೆ ಕಾರಣ	ಮರಣ ಆದ ದಿನಾಂಕ	ಸಂಭವಿಸಿದ ಸ್ಥಳ	ಮರಣ ಆದ ಸಮಯ *	ಪ್ರಮಾಣಪತ್ರ ಕೊಟ್ಟವರ ಹೆಸರು ಮತ್ತು ಅವರು ಆ ಸಮಯದಲ್ಲಿ ಹೊಂದಿದ್ದ ಸ್ಥಾನ	ಷರಾ
				ವರ್ಷ	ತಿಂಗಳು	ದಿನ						
1	2	3	4	5	6	7	8	9	10	11	12	13	14	15

* ಸತ್ತ ವ್ಯಕ್ತಿಯು ಎಷ್ಟರವರೆಗೆ ಜ್ವರ, ಕೆಮ್ಮು, ನಾಂಸ, ಅಜೀರ್ಣ, ಭೇದಿಯಿಂದ ಬಳಲುತ್ತಿದ್ದನು ಮೊದಲಾದ ರೋಗಗಳನ್ನು ಗುರುತಿಸುವುದು (Symptoms) ಅವುಗಳ ಅವಧಿಯನ್ನು ಅಂದರೆ ಎಷ್ಟು ಕಾಲ ಪೀಡಿಸಿದ್ದನ್ನು (Duration) ಸಹ ನಮೂದು ಮಾಡಬೇಕು.

N. B.—ಈ ರಿಜಿಸ್ಟರ್ ಮರಣ ಸಂಭವಿಸಿದ ನಂತರ 24 ತಾಸುಗಳ ಒಳಗೆ ರವಾನಿಸಲ್ಪಡಬೇಕು. (Despatched)

ಮರಣ ಹೊಸ್ಮಠ ಹೋರು ಮತ್ತು ಸಾವಾಸ.

ಮಾಡಿರುವ ಸಂಪೂರ್ಣ ವಿವರವನ್ನು ಕೊಡತಕ್ಕದ್ದು.

192 ನೇ ಇಸವಿ

ಅಂಶದ ಸಂಖ್ಯೆ	ಅಳತೆಯ ಅಳತೆಗೋಲು	ಕೊಡಬೇಕಾದ ಮೊತ್ತ	ಅಳತೆಯ ಮೊತ್ತ	ಸಾಲಕ್ಕೆ ಕೊಟ್ಟ ಮೊತ್ತ	ಕೊಡಬೇಕಾದ ಮೊತ್ತ	ಸಾಲ	ಕೂಲಿ ಪ್ರಮಾಣ: ದರ	ಕೂಲಿ ಪ್ರಮಾಣ: ಮೊತ್ತ	ಕೊಡಬೇಕಾದ ಮೊತ್ತ	ಸಾಲ ಕೊಟ್ಟಿದ್ದು ಮತ್ತು ಕೂಲಿ ಕೊಟ್ಟಿದ್ದು ಸೇರಿ ಮೊತ್ತ	ಸಾಲ ಕೊಟ್ಟಿದ್ದು ಮತ್ತು ಕೂಲಿ ಕೊಟ್ಟಿದ್ದು ಸೇರಿ ಸಂಖ್ಯೆ	ಸಾಲ ಕೊಟ್ಟಿದ್ದು ಮತ್ತು ಕೂಲಿ ಕೊಟ್ಟಿದ್ದು ಸೇರಿ ಅಳತೆಯ ಸಂಖ್ಯೆ	ಸಾಲ ಮತ್ತು ಕೂಲಿ ಕೊಟ್ಟಿದ್ದು ಸೇರಿ ಅಳತೆಯ ಮೊತ್ತ	ಶೇರಾ
							ರೂಪಾಯಿ	ಕಾಸು						
1	2	3	4	5	6	7	8	9	10	11	12	13	14	15	16

ಮಾಡಿರುವ ಸಂಪೂರ್ಣ ವಿವರವನ್ನು ಕೊಡತಕ್ಕದ್ದು.

192 ನೇ ಇಸವಿ

ಅಂಶದ ಸಂಖ್ಯೆ	ಅಳತೆಯ ಅಳತೆಗೋಲು	ಕೆಲಸಕ್ಕೆ ಕೊಟ್ಟ ಮೊತ್ತ	ಕೊಡಬೇಕಾದ ಮೊತ್ತ	ಸಾಲಕ್ಕೆ ಕೊಟ್ಟ ಮೊತ್ತ	ಸಾಲ	ಕೂಲಿ ಪ್ರಮಾಣ: ದರ		ಕೂಲಿ ಪ್ರಮಾಣ: ಮೊತ್ತ	ಕೊಡಬೇಕಾದ ಮೊತ್ತ	ಸಾಲ ಕೊಟ್ಟಿದ್ದು ಮತ್ತು ಕೂಲಿ ಕೊಟ್ಟಿದ್ದು ಸೇರಿ ಮೊತ್ತ	ಸಾಲ ಕೊಟ್ಟಿದ್ದು ಮತ್ತು ಕೂಲಿ ಕೊಟ್ಟಿದ್ದು ಸೇರಿ ಸಂಖ್ಯೆ	ಸಾಲ ಕೊಟ್ಟಿದ್ದು ಮತ್ತು ಕೂಲಿ ಕೊಟ್ಟಿದ್ದು ಸೇರಿ ಅಳತೆಯ ಸಂಖ್ಯೆ	ಸಾಲ ಮತ್ತು ಕೂಲಿ ಕೊಟ್ಟಿದ್ದು ಸೇರಿ ಅಳತೆಯ ಮೊತ್ತ	ಶೇರಾ
						ರೂಪಾಯಿ	ಕಾಸು								
1	2	3	4	5	6	7	8	9	10	11	12	13	14	15	16	17

ಪಿ. ಶ್ಯಾಮಣ್ಣಾಚಾರ್,
ಪ್ರಿಸಿಡಿಂಗ್,
ಶಾಲಾಭಿವೃದ್ಧಿ ಮಂಡಳಿಯವರು.

WD 1177 GPS—30—29-1-38